23

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರ**
**<u>ನಿಯಮ 72ರ ಗಮನ ಸೆಳೆಯುವ ಸೂಚನೆಗೆ ಉತ್ತರ</u>**

**ಪ್ರಶ್ನೆ:** 2010 ಡಿಸೆಂಬರ್‌ನಲ್ಲಿ CAA/NRC ಕಾಯ್ದೆಯನ್ನು ರದ್ದುಪಡಿಸಬೇಕೆಂಬ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮಹಾನಗರದಲ್ಲಿ ನಡೆದ ಹೋರಾಟ ಸಂದರ್ಭದಲ್ಲಿ ಪೊಲೀಸ್ ಗೋಲಿಬಾರ್ ನಡೆಸಿ ಗುಂಡಿಗೆ ಬಲಿಯಾದ ಶ್ರೀ ಜೀಲಿಲ್ ಮತ್ತು ನೌಶಿನ ಇವರು ಗುಂಡಿಗೆ ಬಲಿಯಾಗಿದ್ದು, ಇವರ ಕುಟುಂಬಕ್ಕೆ ಸರ್ಕಾರದಿಂದ ಯಾವುದೇ ಪರಿಹಾರ ನೀಡಿರುವುದಿಲ್ಲ. ಇದೇ ರೀತಿ ಇತರ ಪ್ರಕರಣದಲ್ಲಿ ಪೊಲೀಸ್ ಗುಂಡಿಗೆ ಬಲಿಯಾದವರಿಗೆ ಪರಿಹಾರ ನೀಡಿದ್ದರೂ, ಜೀಲಿಲ್ ಮತ್ತು ನೌಶಿನ್ ಕುಟುಂಬಕ್ಕೆ ಇನ್ನೂ ಪರಿಹಾರ ನೀಡದೇ ಇರುವುದರಿಂದ ಕೂಡಲೇ ಪರಿಹಾರ ಒದಗಿಸಬೇಕೆಂಬುದರ ಕುರಿತು.

**ಉತ್ತರ:** ದಿನಾಂಕ: 19.12.2019 ರಂದು ಸಿಎಎ/ಎನ್‌ಆರ್‌ಸಿ ಕಾಯ್ದೆಯ ವಿರುದ್ಧ ನಡೆದ ಪ್ರತಿಭಟನೆಗೆ ಸಂಬಂಧಿಸಿದಂತೆ ಮಂಗಳೂರು ಉತ್ತರ ಪೊಲೀಸ್ ಠಾಣಾ ಮೊಕದ್ದಮೆ ಸಂಖ್ಯೆ: 133/2019, ಕಲಂ: 143, 147, 148, 188, 353, 332, 324, 427, 307, 120(ಬಿ) ಜೊತೆಗೆ 149 ಐಪಿಸಿ, ಕಲಂ: 2(ಎ), 2(ಬಿ) ಕೆ.ಪಿ.ಡಿ.ಎಲ್.ಪಿ. ಕಾಯ್ದೆ, ಕಲಂ: 174 ಸಿ.ಆರ್.ಪಿ.ಸಿ. ಗೋಲಿಬಾರ್ ಪ್ರಕರಣದಲ್ಲಿ ಅಬ್ದುಲ್ ಜಲೀಲ್ ಮೊಹಮ್ಮದ್ ಮತ್ತು ನೌಶಿರ್ ಇಬ್ಬರು ಮೃತಪಟ್ಟಿರುತ್ತಾರೆ. ಈ ಘಟನೆಯ ಬಗ್ಗೆ, ಸರ್ಕಾರವು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ, ಉಡುಪಿ ಜಿಲ್ಲೆ ಇವರನ್ನು ಮ್ಯಾಜಿಸ್ಟೀರಿಯಲ್ ವಿಚಾರಣೆ (Magisterial Enquiry) ಅಧಿಕಾರಿಯನ್ನಾಗಿ ನೇಮಿಸಿ ತನಿಖೆಗೆ ಆದೇಶಿಸಿರುತ್ತದೆ. ಸದರಿ ವಿಚಾರಣೆ ವರದಿಯಲ್ಲಿಯೂ ಸಹ, ಈ ಘಟನೆ ನಡೆದ ದಿನ ಉದ್ರಿಕ್ತರ ಗುಂಪು ಹೆಚ್ಚಿನ ಪ್ರಮಾಣದಲ್ಲಿ ದೊಂಬಿ ನಡೆಸುವ ಸಾಧ್ಯತೆ ಇದ್ದುದರಿಂದ, ಪೊಲೀಸರು ಗೋಲಿಬಾರ್ ಮಾಡುವ ಅನಿವಾರ್ಯತೆ ಇತ್ತು ಎಂದು ವರದಿಯನ್ನು ಸಲ್ಲಿಸಿರುತ್ತಾರೆ. ಈ ಮ್ಯಾಜಿಸ್ಟೀರಿಯಲ್ ವಿಚಾರಣಾ ವರದಿಯನ್ನು ಸರ್ಕಾರವು ಒಪ್ಪಿಕೊಂಡಿರುವುದರಿಂದ, ಪರಿಹಾರವನ್ನು ಘೋಷಿಸುವ ಕುರಿತು ಯಾವುದೇ ತೀರ್ಮಾನವನ್ನು ಕೈಗೊಂಡಿರುವುದಿಲ್ಲ.

---

ಹೆಚ್‌ಡಿ 318 ಪಿಸಿಇ 2025

**(ಡಾ: ಜಿ. ಪರಮೇಶ್ವರ)**
ಗೃಹ ಸಚಿವರು